

# ಬದುಕಿನ ಪಯಣದಲ್ಲಿ ಸಂಬಂಧಗಳ ಸಿಗ್ನಲ್

■ ಗೌರಿ

## ಗಂಡು ಹೆಣ್ಣಿನ ಸಂಬಂಧಗಳನ್ನು ಆಧುನಿಕ ಬದುಕಿನ ಬೆಳಕಲ್ಲಿಟ್ಟು ನೋಡುವ ಕಿರುಚಿತ್ರವಿದು.

ಗಂಡು ಹೆಣ್ಣಿನ ಸಂಬಂಧ ಎನ್ನುವುದು ತಳವೇ ಇರದ ಪಾತಾಳದಂತೆ. ಅದರ ಆಳಕ್ಕೆ ಇಳಿದಷ್ಟೂ ಇನ್ನಷ್ಟು ಜಟಿಲವೂ ನಿಗೂಢವೂ ಆಗುತ್ತಲೇ ಹೋಗುತ್ತದೆ. ಹಾಗಾಗಿಯೇ ಅದು ಎಲ್ಲ ಸೃಜನಶೀಲಮಾಧ್ಯಮಗಳಿಗೂ ಸವಾಲಿನ ಸರಕಾಗಿ ಒದಗಿಬರುತ್ತಲೇ ಇದೆ.

ಶಶಾಂಕ್ ಎಸ್. ಸಿಂಗ್ ನಿರ್ದೇಶನದ 'ದೊಬಾರಾ ಅಲ್‌ವಿದಾ' ಕಿರುಚಿತ್ರವೂ ಇದೇ ವಸ್ತುವನ್ನು ಎತ್ತಿಕೊಂಡಿದೆ. ಇದು ಎಷ್ಟು ಹಳೆಯದೋ ಅಷ್ಟೇ ಹೊಸದೂ ಹೌದು ಎನ್ನುವುದಕ್ಕೆ ಈ ಕಿರುಚಿತ್ರ ನಿದರ್ಶನ.

ಮುಂಬೈನಲ್ಲಿ ಶೇರ್ ಕ್ಯಾಬ್‌ನಲ್ಲಿ ಹತ್ತಿ ಕುಳಿತುಕೊಳ್ಳುವ ಕುನಾಲ್‌ನಿಗೆ ಅರ್ಧ ದಾರಿಯಲ್ಲಿ ತನ್ನದೇ ಹಳೆಯ ಗೆಳತಿ ಸಿಗುತ್ತಾಳೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ತಲುಪುವವರೆಗೆ ಅವರ ನಡುವೆ ನಡೆಯುವ ಮಾತುಕತೆಗಳೇ ಈ ಕಿರುಚಿತ್ರದ ವಸ್ತು.

ಅಚಾನಕ್ಕಾಗಿ ಸಿಕ್ಕ ಇಬ್ಬರೂ ತುಸು ಮುಜುಗರ, ಅಚ್ಚರಿ, ಹಿಂಜರಿಕೆಗಳಿಂದಲೇ ಮಾತಿಗೆ ತೊಡಗಿಕೊಳ್ಳುತ್ತಾರೆ. ಕುನಾಲ್ ಒಂದೂವರೆ ವರ್ಷಗಳ ನಂತರ ದೆಹಲಿಗೆ ಬಂದಿದ್ದಾನೆ. ಅವರಿಬ್ಬರೂ ಒಟ್ಟಿಗೆ ಸುತ್ತಾಡುತ್ತಿದ್ದ ರಸ್ತೆಯಲ್ಲಿಯೇ ಹೋಗುತ್ತಿದ್ದಾರೆ. ಅಂದು ನಲ್ವತ್ತು ಸೆಕೆಂಡ್ ಇದ್ದ ಸಿಗ್ನಲ್ ಇಂದು ಎರಡು ನಿಮಿಷಗಳಾಗಿದೆ. ಬದಲಾಗಿರುವುದು ಸಿಗ್ನಲ್ ಅಷ್ಟೇ ಅಲ್ಲ, ಸುತ್ತಲಿನ ಜಗತ್ತೂ, ಅವರ ಮನಸ್ಸುಗಳೂ.

ಮಾತಿನ ನಡುವೆಯೇ ತಮ್ಮ ಪರಿಚಯವಾಗಿದ್ದು, ಪ್ರೀತಿ ಮೊಳೆತಿದ್ದು, ಒಟ್ಟಿಗೇ ಬದುಕುತ್ತಿದ್ದದ್ದು

ಹೆಸರು: ದೊಬಾರಾ ಅಲ್‌ವಿದಾ
ನಿರ್ದೇಶನ: ಶಶಾಂಕ್ ಎಸ್. ಸಿಂಗ್
ಛಾಯಾಗ್ರಹಣ: ದೀಪಕ್ ಕುಮಾರ್
ಸಂಕಲನ: ಮಾನಸ್ ಮಿತ್ತಲ್
ಧ್ವನಿ ವಿನ್ಯಾಸ: ಸಂಪತ್ ಅಲ್ವಾರ್
ಸಂಗೀತ: ಕೃಷ್ಣಾ ಸೊಲೊ
ತಾರಾಗಣ: ಸ್ವರಾ ಭಾಸ್ಕರ್, ಗುಲ್ಶನ್ ದೇವಯ್ಯ, ಸ್ವಪ್ನಿಲ್ ಕೊಪ್ರಿವಾರ್

ಎಲ್ಲವನ್ನೂ ನೆನಪಿಸಿಕೊಳ್ಳುತ್ತಾರೆ. ಜೊತೆಗೆ ತಾವಿಬ್ಬರೂ ಬೇರೆಯಾಗಲು ಕಾರಣ ಯಾರು ಎಂಬ ಕುರಿತು ಸಿಟ್ಟಿನಲ್ಲಿ ಬೈದಾಡಿಕೊಳ್ಳುತ್ತಾರೆ. ಅವರ ಸ್ನೇಹಿತರು, ವರ್ತನೆ, ಅಹಂಕಾರ, ವೃತ್ತಿಜೀವನದ ಕನಸುಗಳು ಎಲ್ಲವೂ ಅವರ ಮಾತಿನಲ್ಲಿ ಬಂದು ಹೋಗುತ್ತವೆ.

ಕೊನೆಗೂ ಒಬ್ಬರು ಇನ್ನೊಬ್ಬರನ್ನು ನಿಯಂತ್ರಿಸಲು ಯತ್ನಿಸುತ್ತಿದ್ದದ್ದೇ ತಮ್ಮಿಬ್ಬರ ಸಂಬಂಧದಲ್ಲಿ ಬಿರುಕು ಮೂಡಲು ಕಾರಣ ಎಂಬುದು ಅವರಿಗೆ ಅರಿವಾಗುತ್ತದೆ.

ಎಷ್ಟೋ ಸಲ ತುಂಬ ಹತ್ತಿರದಿಂದ ನೋಡಿದಾಗ ಕಾಣಿಸದ ಎಷ್ಟೋ ಸಂಗತಿಗಳು ತುಸು ದೂರದಿಂದ ನೋಡಿದಾಗ ಇಡಿಯಾಗಿ ಕಾಣಿಸುತ್ತವೆ. ಆಗ ಆ ವಸ್ತುವಿನ ಬಗ್ಗೆ, ವ್ಯಕ್ತಿಗಳ ಬಗ್ಗೆ ನಮ್ಮ ಮನೋಭಾವಗಳು ಬದಲಾಗುತ್ತವೆ. ಗಂಡು ಹೆಣ್ಣಿನ ಸಂಬಂಧದಲ್ಲಿಯೂ ಹೀಗೆ ಆಗುವುದಿದೆ. ಜೊತೆಗಿದ್ದಾಗ ಬರೀ ದೋಷಗಳೇ ಕಾಣುತ್ತಿರುತ್ತವೆ. ದೂಷಣೆಗಳೇ ಮನಸ್ಸು ತುಂಬಿರುತ್ತವೆ. ಆದರೆ ದೂರ ಹೋದ ಮೇಲೆ ಅವರ ಅಗತ್ಯ ಅರಿವಾಗುತ್ತದೆ. ಅದೂ ಎಷ್ಟೋ ದಿನಗಳ ಕಾಲ ದೂರವಿದ್ದು ಮತ್ತೆ ಭೇಟಿಯಾದಾಗ ಬೇರೆಯದೇ ಬೆಳಕಲ್ಲಿ ಎಲ್ಲವೂ ಕಾಣಿಸಲು ಆರಂಭಿಸುತ್ತವೆ. ಹಿಂದೆ ತುಂಬ ಮುಖ್ಯ ಅನಿಸಿದ್ದ ಎಷ್ಟೋ ಸಂಗತಿಗಳು ಈಗ ಕ್ಷುಲ್ಲಕ ಅನಿಸುತ್ತವೆ. ಯಾವಾಗಲೋ ನಿರ್ಲಕ್ಷಿಸಿದ್ದ ಸಂಗತಿಗಳು ಎಷ್ಟು ಮುಖ್ಯವಾಗಿದ್ದವಲ್ಲ ಎಂಬ ಭಾವ ಮೂಡುತ್ತದೆ. ಆದರೆ ಕಾಲ ಯಾರಿಗೂ ಕಾಯದೆ ಹರಿಯುತ್ತಿರುತ್ತದೆ. ಪರಿಸ್ಥಿತಿ ಎಲ್ಲ ಸಮಯದಲ್ಲಿಯೂ ನಮ್ಮ ಕೈಯಲ್ಲಿರುವುದಿಲ್ಲ.

ಇಲ್ಲಿಯೂ ಅಷ್ಟೆ, ಕುನಾಲ್‌ಗೆ ನಾವಿಬ್ಬರೂ ಬೇರಾಗಿ ತಪ್ಪು ಮಾಡಿದೆವು ಅನಿಸುತ್ತಿದೆ. ಈಗಲೂ ಒಟ್ಟಿಗೇ ಬದುಕಿದರೆ ಬದುಕು ಸುಂದರವಾಗುತ್ತದಲ್ಲ ಎಂಬ ಆಸೆ ಹುಟ್ಟಿದೆ. ಆದರೆ ಪರಿಸ್ಥಿತಿ ಅವನಿಗಿಂತ ಒಂದು ಹೆಜ್ಜೆ ಮುಂದೆ ನಿಂತಿದೆ. ಅವನ ಹಳೆಯ ಗೆಳತಿ ಬೇರೆ ಹುಡುಗನ ಜೊತೆಗೆ ಪ್ರೀತಿಯಲ್ಲಿ ಬಿದ್ದಿದ್ದಾಳೆ.

ಕಿರುಚಿತ್ರದಲ್ಲಿ ಕಾಣುವ ಪ್ರಯಾಣ ಬದುಕಿನ ಯಾನವನ್ನೂ ಧ್ವನಿಸುವಂತಿದೆ. ಸ್ವರಾ ಮತ್ತು ಗುಲ್ಶನ್ ನಟನೆ ಕಾಡುವಷ್ಟು ಶಕ್ತವಾಗಿವೆ. ತುಂಬ ಸರಳವೂ ಅಷ್ಟೇ ಸಂಕೀರ್ಣವೂ ಆದ ವಸ್ತುವನ್ನು ಮನಸ್ಸಿಗೆ ಮುಟ್ಟುವ ಹಾಗೆ ನಿರ್ದೇಶಕರು ಕಟ್ಟಿಕೊಟ್ಟಿದ್ದಾರೆ. ಇಪ್ಪತ್ತು ನಿಮಿಷಗಳ ಈ ಕಿರುಚಿತ್ರಕ್ಕೆ ಮನಸ್ಸನ್ನು ಆರ್ದ್ರಗೊಳಿಸುವ ಶಕ್ತಿ ಇದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3yljC6t ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.